ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದು ಅಡ್ಜರ್ನ್‌ಮೆಂಟ್ ಮೋಷನ್ ಇದೆ.

ಅಧ್ಯಕ್ಷರು : ಈಗ ಏನಾಗಿದೆ ಎಂದರೆ ಇಲ್ಲಿಗೆ ಮುಕ್ತಾಯ ಮಾಡೋಣ. ಮಾನ್ಯ ವಿರೋಧ ಪಕ್ಷದವರು....

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಹೊಸ ಮಂತ್ರಿಗಳ ಪರಿಚಯ ಮಾಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹೊಸ ಮಂತ್ರಿ ಮಂಡಲವನ್ನು ರಚನೆ ಮಾಡಿದ್ದೀರಿ, ಯಾರ್ಯಾರು ಮಂತ್ರಿಗಳಾಗಿದ್ದಾರೆ ಎಂಬುದನ್ನು ಸದನಕ್ಕೆ ಪರಿಚಯಿಸಬೇಕು. ಅದು ಸಂಪ್ರದಾಯ.

ಶ್ರೀ ಡಿ.ಕೆ. ಶಿವಕುಮಾರ್ : ಮೊದಲೇ ಕೇಳಬೇಕಾಗಿತ್ತು, ಅವರು ಮಾಡುತ್ತಾರೆ. ನೀವು ಅದನ್ನು ಮೊದಲೇ ಕೇಳಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಯಾರ್ಯಾರು ಮಂತ್ರಿಗಳಾಗಿದ್ದಾರೆ ಎಂದು ತಿಳಿಸುವುದು ಸದನದ ಸಂಪ್ರದಾಯ, ಸಂಸದೀಯ ನಡವಳಿಕೆ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಸಚಿವ ಸಂಪುಟವನ್ನು ವಿಸ್ತರಣೆ ಮಾಡಿದ್ದಾರೆ. ಅದರಲ್ಲಿ ಯಾರಾರು ಮಂತ್ರಿಗಳಾಗಿದ್ದಾರೆ ಎಂಬುದನ್ನು ತಾವು ಸದನಕ್ಕೆ ಪರಿಚಯ ಮಾಡಬೇಕು. ಅದು ಸಂಪ್ರದಾಯ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಆಧ್ಯಕ್ಷರೆ....

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ಎಲ್ಲರೂ ಮಾತನಾಡಿದ್ದಾರೆ. ಮತ್ತೇಕೆ? ಎಲ್ಲರೂ ಮಾತನಾಡಬೇಕು ಎನ್ನುವುದು ಬೇಡಿ. ಸಾಕು

4. ನಿಯಮ 69ರ ಮೇಲಿನ ಚರ್ಚೆ (ಮುಂದುವರಿದುದು)

ವಿಷಯ:– ನೈಸ್ ಕಂಪನಿಯ ಪರವಾಗಿ ಮುಖ್ಯಮಂತ್ರಿಗಳಿಗೆ ಲಂಚದ ಆಮಿಷ ಒಡ್ಡಿದರು ಎನ್ನಲಾದ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ತಾನು, ಮಾಜಿ ಮಂತ್ರಿ ಹಾಗೂ ಜರ್ನಲಿಸ್ಟ್ ಬಗ್ಗೆ ಯಾವುದೇ ಆಪಾದನೆ ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಂತ್ರಿಮಂಡಲ ವಿಸ್ತರಣೆಯಾಯಿತು. ಹಾಗಾಗಿ ಆ ಪವಿತ್ರ ಸ್ಥಾನದಿಂದ ಜವಾಬ್ದಾರಿಯಿಂದ ಹೇಳಿಕೆ ಕೊಟ್ಟನಂತರ ನಾವು ಅವರಿಗೆ ಗೌರವ ಕೊಡಬೇಕಾಗುತ್ತದೆ. ನಾನು ಈ ಸದನದಲ್ಲಿ ಇಷ್ಟೇ ಹೇಳುತ್ತೇನೆ, ಯಾವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಹೇಳಿದರು, ಅದೇ ವಿಚಾರವನ್ನು ಮೊನ್ನೆ ಹೇಳಿದ್ದರೆ ಸದನದ ಕಾರ್ಯಕಲಾಪ

ಈ ಮಟ್ಟಕ್ಕೆ ಮುಟ್ಟುತ್ತಿರಲಿಲ್ಲ. ಆ ಸ್ಪಷ್ಟವಾದ ಹೇಳಿಕೆಯನ್ನು ಆ ದಿನ ಕೊಡಬೇಕಾಗಿತ್ತು. ಇವತ್ತು ಅವರ ಆ ಹೇಳಿಕೆಯಿಂದ ಮಾನ್ಯ ಧರ್ಮ್‌ಸಿಂಗ್ ಮಂತ್ರಿಮಂಡಲದ ಎಲ್ಲಾ ಮಾಜಿ ಮಂತ್ರಿಗಳು, ಅವರು ಆ ಸೈಡ್ ಇರಬಹುದು; ಈ ಸೈಡ್ ಇರಬಹುದು ಹಾಗೂ ನಮ್ಮ ಜರ್ನಲಿಸ್ಟ್ ಇರಬಹುದು; ಸಂಶಯದ ವಾತಾವರಣದಿಂದ ದೂರವಾಗಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಕೊನೆಯದಾಗಿ ಆ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು 12ನೇ ತಾರೀಖು ಕೊಟ್ಟರು. ತಾವು ಇವತ್ತು ಡಿನ್ನೆ ಮಾಡಿದ್ದೀರಿ, ತಮಗೆ ಅಷ್ಟು ದೊಡ್ಡ ಕಚೇರಿ ಇದೆ, ಸೆಕ್ರೆಟರಿಗಳು ಇದ್ದಾರೆ, ಸ್ಟಾಫ್ ಇದೆ. ಈ ಹೇಳಿಕೆ ಕೊಟ್ಟನಂತರ ದಿಲ್ಲಿಯಿಂದ ಮಾನ್ಯ ಹೆಚ್.ಕೆ. ಪಾಟೀಲ್‌ರವರು ನಮ್ಮ ಮೇಲ್ಮನೆಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಬಗ್ಗೆ ಸ್ಪಷ್ಟವಾಗಿ ನೀವು ಬೇಡ, ನಿಮ್ಮ ಕಚೇರಿಯಿಂದ it is totally false, ಇಂತಹ ಸ್ಟೇಟ್‌ಮೆಂಟ್ ಅನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿಲ್ಲವೆಂದಾದರೆ, ನಮಗೆ ಇಲ್ಲಿ ವಿಶೇಷವಾಗಿ ಸದನದಲ್ಲಿ ಪ್ರಸ್ತಾಪ ಮಾಡುವ ಅವಕಾಶವಿರುತ್ತ ಇರಲಿಲ್ಲ. ಅದೇ ರೀತಿಯಲ್ಲಿ ಇನ್ನು ಮುಂದೆ ಇಂತಹ ಘಟನೆಗಳು ಆಗಬಾರದು. ಈ ರೀತಿಯಲ್ಲಿ ತಪ್ಪು ಸ್ಟೇಟ್‌ಮೆಂಟ್ ಬಂದರೆ, ತಕ್ಷಣ ನಿಮ್ಮ ಕಚೇರಿಯಿಂದ ಇದು ರ್ಯಾಟಿಫಿಕೇಶನ್ ಆದರೆ ಒಳ್ಳೆಯ ವಾತಾವರಣದಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇವತ್ತು ಏನು ಸ್ಟೇಟ್‌ಮೆಂಟ್ ಅನ್ನು ಮಾಡಿದ್ದಾರೆ, ನನ್ನ ಪ್ರಕಾರ ಇದು ಈ ಸ್ಟೇಟ್‌ಗೆ ಒಂದು ದೊಡ್ಡ ಶಾಕ್ ಆಗಿದೆ; ಏಕೆಂದರೆ ರಾಜಕೀಯದ ವ್ಯವಸ್ಥೆ ಇದು. ಈ ಮಾಧ್ಯಮವನ್ನು ಬಿಟ್ಟು ನಾವು ರಾಜಕಾರಣಿಗಳು ಬಿಟ್ಟು ಬದುಕುವುದಕ್ಕೆ ಸಾಧ್ಯವಿಲ್ಲ. ನಾವು ತಿರುಗು, ಮುರುಗು ಅವರ ರಕ್ಷಣೆಗೆ ಹೋಗಬೇಕು, ಅವರು ನಮ್ಮ ರಕ್ಷಣೆಗೆ ಬರಬೇಕು. ನಾವು ಮಾಡಿದ ತಪ್ಪನ್ನು ಅವರು ಎತ್ತಿ ಹಿಡಿಯಬೇಕು, ಒಳ್ಳೆಯದು ಮಾಡಿದ್ದನ್ನು ಅವರು ಎತ್ತಿ ಹಿಡಿಯಬೇಕು. ಇಲ್ಲಿ ನಮ್ಮ ಇಬ್ಬರಿಗೂ ಒಂದು confrontation ಈ ಲೆಜಿಸ್ಲೇಚರ್‌ಗೂ, ಮೀಡಿಯಾದವರಿಗೂ ಇವತ್ತಿನಿಂದ ಪ್ರಾರಂಭವಾಗುತ್ತದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಮೇಲೆ ನಾವು ಒಪ್ಪಿಕೊಳ್ಳಲೇ ಬೇಕು. ಆದರೆ ಇದರ ಬಗ್ಗೆ ಅನುಮಾನ ಬಂದಂತಹ ಸಂದರ್ಭದಲ್ಲಿ ಇದನ್ನು

ಪರಿಹಾರ ಮಾಡುವುದಕ್ಕೆ ಒಂದು ವ್ಯವಸ್ಥೆ ಆಗಬೇಕಾಗುತ್ತದೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಇದಕ್ಕೆ ಏನಾದರೂ ಒಂದು ಸಣ್ಣ ಸಮಿತಿಯನ್ನು ಮಾಡಲಿ, ಇಲ್ಲ ಇಲ್ಲಿ ಯಾವುದರಿಂದ ತಪ್ಪಾಯಿತು, ಇಲ್ಲ ಅವರು ಹೇಳಿಕೆ ಮಾಡಿರುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಆಯಿತಾ? ಇಲ್ಲ ಸ್ಲಿಪ್‌ನಲ್ಲಿ ಆಯಿತಾ, ಪೇಪರ್ ನವರು ಏಕೆಂದರೆ ಇವತ್ತು ಕಂಪ್ಯಾರಿಸನ್ ಹಾಕಿ ಬಿಡುತ್ತಾರೆ. ಮೀಡಿಯಾದವರು ಕಂಪ್ಯಾರಿಸನ್‌ಗೆ ಹೊರಟು ಬಿಡುತ್ತಾರೆ. ಅವರು ಹೀಗೆ ಹೇಳಿಕೆ ಮಾಡಿದರು, ಇವತ್ತು ಹೀಗೆ ಹೇಳಿದರೆಂದು ಕಂಪ್ಯಾರಿಸನ್‌ಗೆ ಹೊರಡುತ್ತಾರೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಇದರ ಬಗ್ಗೆ ಫೈನಲ್ ಆಗಿ ಮಾತನಾಡುವಾಗ ಇದಕ್ಕೆ ಮಂಗಳ ಹಾಡುವುದಕ್ಕೆ ಒಂದು ಸ್ಮಾಲ್ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳುತ್ತೇನೆ. ಈ ವಿಷಯದ ಬಗ್ಗೆ ಮೇಲ್ಮನೆಯಲ್ಲೂ ಗಲಾಟೆಯಾಗುತ್ತಿದೆ. ಇದಕ್ಕೆ ಹೌಸ್ ಕಮಿಟಿಯನ್ನು ಮಾಡಿದರೆ ಬಹಳ ಉತ್ತಮವಾಗುತ್ತದೆ, ಏಕೆಂದರೆ ನಾವು ಒಂದು ಸಲ ವಿಡಿಯೋವನ್ನು ಒಮ್ಮೆ ನೋಡಿದ ಹಾಗೆ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಮುಂದೆ ವಿಡಿಯೋವನ್ನು ತೆಗೆಸಿದ್ದಾರೆಂದು ಹೇಳಿದರು. ಆದುದರಿಂದ ಇದಕ್ಕೆ ಒಂದು ಹೌಸ್ ಕಮಿಟಿಯನ್ನು ಮಾಡಿದರೆ, ಇದಕ್ಕೆ ಒಂದು ಅನುಕೂಲವಾಗುತ್ತದೆ. ಇನ್ನೊಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ನೆನಪು ಮಾಡಿಕೊಳ್ಳಬೇಕು. ಕಳೆದ ಮೂರು ವರ್ಷಗಳ ಹಿಂದೆ ನಮ್ಮ ಆಫೀಸರ್ ಒಬ್ಬರು ಮಾನ್ಯ ಬಳಿಗಾರ್‌ರವರು ಕೆ.ಪಿ.ಟಿ.ಸಿ.ಎಲ್.ನ ಚೇರ್ಮನ್ ಆಗಿದ್ದರು. ಇವರು ಚೇರ್ಮನ್ ಆಗಿದ್ದಂತಹ ಸಂದರ್ಭದಲ್ಲಿ ಒಬ್ಬ ಮೀಟರ್ ರೀಡರ್ ಚೀಫ್ ಇಂಜಿನಿಯರ್‌ರವರಿಗೆ ಲಂಚವನ್ನು ಕೊಡುವುದಕ್ಕೆ ಹೋದ, ತಕ್ಷಣ ಆ ಚೀಫ್ ಇಂಜಿನಿಯರ್‌ರವರು ಚೇರ್ಮನ್‌ರವರಿಗೆ ಲಂಚ ಕೊಡುವುದಕ್ಕೆ ಬಂದಿದ್ದಾರೆಂದು ಫೋನ್ ಮಾಡಿ ಹೇಳಿದರು. ಆಗ ಅರ್ಧ ಗಂಟೆಯೊಳಗೆ ಕೆ.ಪಿ.ಟಿ.ಸಿ.ಎಲ್. ಚೇರ್ಮನ್‌ರವರು ಆ ಚೀಫ್ ಇಂಜಿನಿಯರ್ ರವರಿಗೆ ಫೋನ್ ಮಾಡಿ, ಈ ಲಂಚವನ್ನು ಕೊಡಲು ಬಂದವನ ಮೇಲೆ ಕೇಸ್ ರಿಜಿಸ್ಟರ್ ಮಾಡಿದಂತಹ ದಾಖಲೆ ಈ ರಾಜ್ಯದಲ್ಲಿ ಇದೆ. ಅದೇ ರೀತಿಯಲ್ಲಿ ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಸುಬ್ಬಯ್ಯ ಎನ್ನುವವರ ಘಟನೆ ಇದೆ. ಇಂತಹ ಸಂದರ್ಭದಲ್ಲಿ ತಾವೂ ಕೂಡ ಯಾರು ಇದಕ್ಕೆ ಪ್ರಯತ್ನ ಪಟ್ಟರು, ತಾವು ಸರ್ಕಾರ ಖರೀದಿಗೆ ಇಲ್ಲವೆಂದು ಹೇಳಿದ್ದೀರಿ; ಅಂದರೆ ಖರೀದಿಗೆ ಒಂದು ಪ್ರಯತ್ನ ಇಲ್ಲಿ ನಡೆದಿರಬೇಕು. ತಾವು ಇಲ್ಲಿ ಖರೀದಿಗೆ ಇಲ್ಲವೆಂದು ಹೇಳಿದ

ಮೇಲೆ, ಏನೋ ಒಂದು ಪ್ರಯತ್ನ ಇಲ್ಲಿ ನಡೆದಿರಬೇಕು. ಇದು ಸುಮ್ಮ ಸುಮ್ಮನೆ ಬೆಂಕಿ ಇಲ್ಲದೇ ಹೊಗೆ ಬರುವುದಕ್ಕೆ "ಸಾಧ್ಯವಿಲ್ಲ. ಆದುದರಿಂದ ತಾವು ಇದರ ಬಗ್ಗೆ ದಯಮಾಡಿ ಚಿಂತನೆ ಮಾಡಿ, ಮುಂದೆ ಒಂದು ಹೆಜ್ಜೆ ಹೋಗಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಈ ವಿಷಯ ಮುಗಿದಿದೆ, ಮತ್ತೆ ಏನು ಮಾತನಾಡುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಾನು ಸಹಿ ಮಾಡಿದ್ದೇನೆ. ಮಾತನಾಡುತ್ತೇನೆ.

ಅಧ್ಯಕ್ಷರು : ನಿಮ್ಮ ಹಿರಿಯ ನಾಯಕರೆಲ್ಲಾ ಮಾತನಾಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಒಪ್ಪುತ್ತೇನೆ, ನಾನು ಎರಡು ನಿಮಿಷಗಳು ಮಾತನಾಡುತ್ತೇನೆ.

ಅಧ್ಯಕ್ಷರು : ಇನ್ನೂ ಬೇರೆ ಬೇರೆ ವಿಷಯಗಳು ಇವೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬಿಎಂಐಸಿ ಕಾರಿಡಾರ್ ವಿಚಾರದಲ್ಲಿ, ಒಬ್ಬ ಪತ್ರಕರ್ತರು ಮತ್ತು ಮಾನ್ಯ ಧರ್ಮಸಿಂಗ್‌ರವರ ಮಂತ್ರಿಮಂಡಲದ ಒಬ್ಬ ಮಂತ್ರಿಯವರು ಲಂಚದ ಆಮೀಷವನ್ನು ಒಡ್ಡುವುದಕ್ಕೆ ಬಂದಿದ್ದರೆಂಬ ವಿಚಾರ ಪತ್ರಿಕೆಯಲ್ಲಿ ಹೇಳಿದ್ದರು, ಮತ್ತೆ ನಿನ್ನೆ ಕೂಡ ಹೇಳಿದ್ದರು. ಈಗ ಅವರು ಇಲ್ಲಿ ಹೇಳಿಕೆಯನ್ನು ಕೊಟ್ಟು, ಆ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿಲ್ಲ. ಆ ರೀತಿ ಪತ್ರಿಕೆಯಲ್ಲಿ ತಪ್ಪಾಗಿ ಪ್ರಿಂಟ್ ಆಗಿದೆ. ಎನ್ನುವ ವಿಚಾರವನ್ನು ಸಭೆಯ ಗಮನಕ್ಕೆ ತಂದರು. ನಮ್ಮ ಹಿರಿಯ ನಾಯಕರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಿನ್ನೆ ನಡೆದಂತಹ ಪತ್ರಿಕಾ ಹೇಳಿಕೆಯ ಬಗ್ಗೆ ಸವಿಸ್ತಾರವಾಗಿ ಹೇಳಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅದನ್ನು ಅಲ್ಲಗಳೆಯಲಿಲ್ಲ. ಹೌದು, ನಾನು ನಿನ್ನೆ ಮಧ್ಯಾಹ್ನ ಪತ್ರಿಕಾ ಹೇಳಿಕೆ ಮಾಡಿದ್ದು ನಿಜವೆಂದು ಹೇಳಿದರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗ ಅಲ್ಲಗಳೆದರು; ಅಂದಮೇಲೆ ನಾಳೆ ಜನರು ಪತ್ರಿಕೆಯನ್ನು ನಂಬಬೇಕೋ ಬೇಡವೊ? ಹಾಗಾದರೆ ಪತ್ರಿಕೆಯವರು ಏನಾದರೂ ಬರೆದುಕೊಂಡು ಬಿಡುತ್ತಾರೊ, ಹೇಗೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಬಹಳ ಜವಾಬ್ದಾರಿಯಿಂದ ಒಂದು ಎನ್‌ಕ್ವಾಯರಿಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಬಹಳ ಜವಾಬ್ದಾರಿ ಇದೆ; ಸುಮ್ಮ ಸುಮ್ಮನೆ ನಾಳೆ ದಿವಸ ಏನು

ಬೇಕಾದರೂ ಪತ್ರಿಕೆಗಳಲ್ಲಿ ಬರೆಯಬೇಕಾಗುತ್ತದೆ, ಪತ್ರಿಕೆಗಳ ಮೇಲೆ ನಂಬಿಕೆ ಇಲ್ಲದ ಹಾಗೆ ಈ ರಾಷ್ಟ್ರದಲ್ಲಿ ಆಗುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಈ ಪತ್ರಿಕೆಯಲ್ಲಿ ಹೇಗೆ ಬಂತು ಎಂಬ ಬಗ್ಗೆ ತನಿಖೆ ಮಾಡಲಿಕ್ಕೆ ಒಂದು ಸದನ ಸಮಿತಿಯನ್ನು ಆದರೂ ಮಾಡಿ. ಇದು ಈಗ ಎನ್‌ಕ್ವಾಯರಿಯಾಗಬೇಕಾಗುತ್ತದೆ ಇಲ್ಲದೇ ಇದ್ದರೆ ಮಾನ್ಯ ಮುಖ್ಯಮಂತ್ರಿಯವರು defamation ಕೇಸ್ ಅನ್ನು ಹಾಕಬೇಕಾಗುತ್ತದೆ. ಇಂಡಿಯನ್ ಫೀನಲ್ ಕೋಡ್ ಸೆಕ್ಷನ್ 499 ಪ್ರಕಾರ ಹಾಕಬೇಕಾಗುತ್ತದೆ. ಈ 499 ಪ್ರಕಾರ ಯಾರು ತಪ್ಪು ಮಾಹಿತಿಗಳನ್ನು ಪತ್ರಿಕೆಗಳಲ್ಲಿ ಪಬ್ಲಿಷ್ ಮಾಡುತ್ತಾರೆ, ಅವರ ಮೇಲೆ ಆಕ್ಷನ್ ಅನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ಇವತ್ತು ನಾವು ಎಲ್ಲವನ್ನೂ ಕಾನೂನು ಬಿಟ್ಟೇ ಮಾಡಿದರೆ ಹೇಗೆ? ಆ ರೀತಿ ಮಾಡದಿದ್ದರೆ, ತಪ್ಪು ದಾರಿಗೆಳೆಯುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಇದನ್ನಾದರೂ ಹೇಳಬೇಕು, ಇಲ್ಲದಿದ್ದರೆ ಪತ್ರಿಕೆಯವರು ಸುಳ್ಳು ಬರೆದಿದ್ದಾರೆ, ತಪ್ಪು ಬರೆದಿದ್ದಾರೆಂದರೆ, ಅದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾನ್ಯ ಮುಖ್ಯಮಂತ್ರಿಯವರು ರಚನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸಭಾ ನಾಯಕರು, ಮಂತ್ರಿ ಮಂಡಲದ ಸದಸ್ಯರನ್ನು ಸಭೆಗೆ ಪರಿಚಯಿಸಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ವಿಚಾರದ ಬಗ್ಗೆ ಈಗಾಗಲೇ ನಾನು ಸ್ಪಷ್ಟೀಕರಣವನ್ನು ಕೊಟ್ಟಿದ್ದೇನೆ. ನಿನ್ನೆ ನಾನು ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವಂಥಾದ್ದನ್ನು, ಮತ್ತೆ ನಾನು ಅವತ್ತು ಏನು ಹೇಳಿಕೆಯನ್ನು ಕೊಟ್ಟಿದ್ದೆ, ಆ ವಿಷಯದಲ್ಲಿ ನಾನು ನಿನ್ನೆ ಮಧ್ಯಾಹ್ನ ಪತ್ರಿಕಾ ಸ್ನೇಹಿತರೊಡನೆ ಹೇಳಿದ್ದೆನೆಯೇ ಹೊರತು, ನಿನ್ನೆ ನಾನು ಇನ್ ಕ್ಯಾಮರಾ ಮೀಟಿಂಗ್‌ಗೆ ಸಿದ್ದನಿದ್ದೇನೆ ಎಂದು ಯಾವುದನ್ನೂ ಹೇಳಿಲ್ಲ. ನಾನು ಅವತ್ತು ಏನು ಹೇಳಿದ್ದೆ, ಇವತ್ತು ಇಲ್ಲಿ ನಡೆದಿರುವಂತಹ ಚರ್ಚೆಗಳ ಬಗ್ಗೆ, ಸರ್ಕಾರದ ಮೇಲೆ ಕಂಪನಿಯ ಮಾಲೀಕರು, ಪದೇ ಪದೇ ಏನು ಚರ್ಚೆಯನ್ನು ಮಾಡುತ್ತಾರೆ, ಇದರ ಬಗ್ಗೆ ಚರ್ಚೆ ಮಾಡಬೇಕೆಂಬ ದೃಷ್ಟಿಯಿಂದ ನಾನು ಏನು ಹೇಳಿದ್ದೆ, ಅದಕ್ಕೆ ನೇರವಾಗಿ ಸರ್ಕಾರ ಸಿದ್ಧ ಇದೆ. ಇದರ ಬಗ್ಗೆ ಜನರಲ್ಲಿ ಒಂದು ತಿಳಿ ವಾತಾವರಣವನ್ನು ತರುವಂಥಾದ್ದಕ್ಕೆ ಇದು ಯಾರಿಂದ ತಪ್ಪು ಆಗಿದೆಯೆಂಬ ಬಗ್ಗೆ ಜನತೆಯ ಮುಂದಿಡಬೇಕೆನ್ನುವ ದೃಷ್ಟಿಯಿಂದ ಅವತ್ತು ಪತ್ರಿಕಾ ಸ್ನೇಹಿತರೊಡನೆ ಈ ಕಂಪನಿಯ ಮಾಲೀಕರು ಬರಲಿ, ಎಂದು ಹೇಳಿದ್ದೇನೆಂಬುದನ್ನು, ನಿನ್ನೆ ಮತ್ತೆ

ಅವರೊಡನೆ ಚರ್ಚೆ ಮಾಡಿದ್ದೇನೆಯೇ ಹೊರತು, ಮತ್ತೆ ನಾನು ನಿನ್ನೆ ಇನ್ ಕ್ಯಾಮರಾ ಮೀಟಿಂಗ್‌ಗೆ ತಯಾರು ಆಗಿದ್ದೆನೆಂಬ ಈ ಪದಗಳನ್ನು ಬಳಸಿಲ್ಲ. ನಾನು ಮೊನ್ನೆ ಆದಂತಹ ವಿಷಯವನ್ನು ಪತ್ರಿಕಾ ಸ್ನೇಹಿತರ ಜೊತೆಯಲ್ಲಿ ಚರ್ಚೆ ಮಾಡಿದೆ ಅಷ್ಟೆ. ಆದುದರಿಂದ ಈ ವಿಷಯದಲ್ಲಿ ಯಾವುದೇ ರೀತಿಯ ಸದನ ಸಮಿತಿ, ಅಥವಾ ಇನ್ನಾವುದೇ ತನಿಖೆ ಎನ್ನುವ ಅವಶ್ಯಕತೆ ಇಲ್ಲ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣವೆಂದು ನಾನು ಮನವಿಯನ್ನು ಮಾಡುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಸಂಪುಟದ ಸದಸ್ಯರುಗಳು ವಿಷಯ: ಹೊಸ ಸಚಿವರ ಪರಿಚಯ.

ಅಧ್ಯಕ್ಷರು : ಮಾನ್ಯ ಸಭಾನಾಯಕರು, ಈಗ ಮಂತ್ರಿಮಂಡಲದ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಸಚಿವ ಸಂಪುಟಕ್ಕೆ ಹೊಸದಾಗಿ 8 ಜನ ಸದಸ್ಯರು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದಾರೆ. ಅವರನ್ನು ಸದನಕ್ಕೆ ಪರಿಚಯ ಮಾಡಬಯಸುತ್ತೇನೆ. ಇವತ್ತು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹಿಂದೆ ಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಡೀ ಪ್ರಮೋಷನ್ ಕೊಟ್ಟಿದ್ದೀರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಬಸವರಾಜರಾಯರೆಡ್ಡಿಯವರೆ, ಸೃಷ್ಟೀಕರಣವನ್ನು ಅಲ್ಲೇ ಕೊಟ್ಟಿದ್ದಾರೆ. ಇದರಲ್ಲಿ ಡಿಮೋಷನ್, ಪ್ರಮೋಷನ್ ಪ್ರಶ್ನೆ ಇಲ್ಲ.

ಶ್ರೀ ಹೆಚ್. ಆಂಜನೇಯ : ಮಾನ್ಯ ಜತ್ತಿಯವರು, ಮಾನ್ಯ ಮುಖ್ಯಮಂತ್ರಿಗಳು ಆಗಿದ್ದರು; ನಂತರ ಬಂದು ವಿದ್ಯಾ ಮಂತ್ರಿಗಳೂ ಕೂಡ ಆಗಿದ್ದರು. ಅವರಿಗೆ ಗೊತ್ತಾಗಲಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ರಾಷ್ಟ್ರಮಟ್ಟದಲ್ಲಿ ಅಧ್ಯಕ್ಷರಾಗಿ ಇದ್ದಂಥಾದ್ದು ಹಿಂದೆ ಹಲವಾರು ಪ್ರಕರಣಗಳು ಇವೆ. ಅವರು ರಾಷ್ಟ್ರಮಟ್ಟದಲ್ಲೂ ಸೇವೆಯನ್ನು ಸಲ್ಲಿಸಿ ಮತ್ತೆ ರಾಜ್ಯಮಟ್ಟದಲ್ಲೂ ಬಂದು ಸೇವೆಯನ್ನು ಸಲ್ಲಿಸಿರುವಂಥಾದ್ದು. ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ